**ಸಾಕ್ಷಿಯನ್ನು ದಿಃ 06.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 15 ಎಂದು, ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.16 ಎಂದು, ಅಸೆಸ್ಮೆಂಟ್ ಶೀಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.17 ಎಂದು, ಒಟ್ಟು 3 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಪ್ರಮಾಣ ಪತ್ರದಲ್ಲಿ ನಾನು ಎಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಾನು ಮೂಳೆತಜ್ಞನಾಗಿ ವಿದ್ಯಾರಣ್ಯ ಆಸ್ಪತ್ರೆಯಲ್ಲಿ 12 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಗಾಯಾಳು ದಿಃ 12.03.2023 ರಂದು ಆಸ್ಪತ್ರೆಗೆ ದಾಖಲಾಗಿರುತ್ತಾರೆ. ನಮ್ಮ ಆಸ್ಪತ್ರೆಗೆ ಬರುವ ಮೊದಲು ಗಾಯಾಳು ನಂಜನಗೂಡಿನ ಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಆ ಬಗ್ಗೆ ಎಕ್ಸರೇ ಹಾಜರು ಪಡಿಸಿರುತ್ತೇನೆ. ಗಾಯಾಳು ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನನಗೆ ಮಾಹಿತಿ ಇಲ್ಲ. ಗಾಯಾಳುವಿಗೆ ಜೆ.ಎಸ್.ಎಸ್ ಆಸ್ಪತ್ರೆಯ ಡಾ. ಮಂಜುನಾಥ್ ಇವರು ಚಿಕಿತ್ಸೆ ನೀಡಿರುತ್ತಾರೆ ಎಂದು ದೋಷರೋಪಣಾ ಪಟ್ಟಿಯಲ್ಲಿ ನಮೂದಾಗಿದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಕ್ರಿಮಿನಲ್ ಮೊಕದ್ದಮೆಯಲ್ಲಿ ನನಗೆ ಸಮನ್ಸ್ ಬಂದಿರುವುದಿಲ್ಲ. ಪೋಲೀಸರು ನಮ್ಮ ಆಸ್ಪತ್ರೆಯಲ್ಲಿ ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದೋಷರೋಪಣಾ ಪಟ್ಟಿಯನ್ನು ನಾನು ನೋಡಿರುವುದಿಲ್ಲ. ಗಾಯಾಳು ಜೆ.ಎಸ್.ಎಸ್

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಮ್ಮ ಆಸ್ಪತ್ರೆಯಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಡಾ. ಮಂಜುನಾಥ್ ರವರು ಗಾಯಾಳುವಿಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಗಾಯಾಳುವನ್ನು ನಾನು ಅಪಘಾತ ಆದ ಮರುದಿನ ನೋಡಿರುತ್ತೇನೆ. ಗಾಯಾಳುವಿಗೆ ಎಷ್ಟು ವಯಸ್ಸು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿ. ಗಾಯಾಳು ಯಾವ ಕೆಲಸ ಮಾಡುತ್ತಿದ್ದರು ಎಂಬುದರ ಬಗ್ಗೆ ದಾಖಲೆ ನೋಡಿರುವುದಿಲ್ಲ. ಅಪಘಾತ ಸಮಯದಲ್ಲಿ ಗಾಯಾಳು ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಆಸ್ಪತ್ರೆಯ ದಾಖಲೆ ಪ್ರಕಾರ 19 ವರ್ಷ ವಯಸ್ಸಾಗಿತ್ತು ಎಂದು ಉತ್ತರಿಸಿರುತ್ತಾರೆ. ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ.

ನನ್ನ ಚಿಕಿತ್ಸೆ ಯಶಸ್ವಿಯಾಗಿದೆ. ಮೂಳೆಗಳು ಕೂಡಿಕೊಂಡಿದೆ. ಮುಂದುವರೆದು ಸಾಕ್ಷಿಯು ಮೂಳೆ ವಕ್ರವಾಗಿ ಕೂಡಿಕೊಂಡಿದೆ ಎಂದು ಹೇಳಿರುತ್ತಾರೆ ಆ ಬಗ್ಗೆ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಸಂಪೂರ್ಣವಾಗಿ ಗುಣಮುಖನಾದ ಕಾರಣ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಗಾಯಾಳುವಿನ ಸ್ಥಿತಿ ಸ್ಥಿರವಾಗಿದ್ದ ಕಾರಣ ಬಿಡುಗಡೆ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಗಾಯಾಳುವನ್ನು ನ್ಯೂನತೆ ಪರಿಗಣಿಸಿಕೊಳ್ಳಲು ಮೆಡಿಕಲ್ ಬೋರ್ಡ್‌ಗೆ ಶಿಫಾರಸ್ಸು ಮಾಡಿರುವುದಿಲ್ಲ. 3 ಮ್ಯಾನ್ ಕಮಿಟಿ ರವರು ನ್ಯೂನತೆ ಪರಿಗಣಿಸಬೇಕು ಎಂದರೆ ಸಾಕ್ಷಿಯು ಶಾಶ್ವತ ಅಂಗನ್ಯೂನತೆಯನ್ನು ದೃಢೀಕರಿಸಲು ಸದರಿ ಕಮಿಟಿಯವರು ನ್ಯೂನತೆ ಪರಿಗಣಿಸಬೇಕು ಎಂದು ಉತ್ತರಿಸಿರುತ್ತಾರೆ. ಗಾಯಾಳುವಿಗೆ Permanent physical impairment ಆಗಿರುತ್ತದೆ. ಸದರಿ ನ್ಯೂನತೆಯನ್ನು ಕಮಿಟಿಯವರೇ ಪರಿಗಣಿಸಬೇಕು ಎಂದರೆ ಸರಿಯಲ್ಲ. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳು ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನ್ಯೂನತೆಯು ರೈಟ್ ಲೋಯರ್ ಲಿಂಬ್ ಗೆ ಮಾತ್ರ ಆಗಿರುತ್ತದೆ. ಗಾಯಾಳುವಿಗೆ ಯಾವುದೇ ಚಿಕಿತ್ಸೆ

ನೀಡದೆ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.